Sri A. BHEEMAPPA NAIK.—The cost of raw materials would be less in view of the raw materials being very near to the spot where it is proposed to locate the factory.

Sri H. SIDDAVEERAPPA.—This particular question raised by the Hon'ble Member will be again examined by the Director of Industries and the Director of Geology.

Marine Steel Industry at Nagavalli.

Q.—868.—Sri S. GOPALA GOWDA (Sagar-Hosanagar).—

Will the Government be pleased to state :—

(*a*) whether they are aware that one Sri H. M. Bhat is making efforts to start a Marine Steel Industry at Nagavally as an allied industry of Bhatkal Ship-building Project;

(*b*) whether it is a fact that he is corresponding with them to get the necessary facilities and financial aid;

(*c*) if the answer to the above is in the affirmative, what they propose to do in the matter ?

A.—Sri H. SIDDAVEERAPPA (Minister for Home and Industries).—

(*a*) Yes.

(*b*) He is corresponding with this Government.

(*c*) The matter is still under consideration.

ಶ್ರೀ ಎಸ್. ಗೋಪಾಲಗೌಡ.—ಭಟ್ಕರ್ ಷಿಪ್ ಬಿಲ್ಡಿಂಗ್ ಪ್ರಾಜೆಕ್ಟಿಗೆ ಅವಶ್ಯಕವಾದ—ನಾಗವಳ್ಳಿಯಲ್ಲಿ ಮೆರೈನ್ ಸ್ಟೀಲ್ ಇಂಡಸ್ಟ್ರೀ ಸ್ಥಾಪಿಸುವುದಕ್ಕೆ ಶ್ರೀ ಎಚ್. ಎಂ. ಭಟ್ ಅನ್ನುವವರು ಸರ್ಕಾರದವರೊಡನೆ ಪತ್ರವ್ಯವಹಾರ ಮಾಡುತ್ತಿರುವ ಬಗ್ಗೆ ಅವರಿಗೆ ಸರ್ಕಾರದವರು ಏನು ಉತ್ತರ ಕೊಟ್ಟಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಈಗ ನಮ್ಮ ಸರ್ಕಾರದ ಕೌನ್ಸಿಲ್ ಮುಂದೆ ಚರ್ಚೆಗೆ ಇದೆ, ಇನ್ನೂ ತೀರ್ಮಾನ ತಗೆದುಕೊಂಡಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಈ ಪ್ರದೇಶದಲ್ಲಿ ಒಂದು ಮೆರೈನ್ ಸ್ಟೀಲ್ ಇಂಡಸ್ಟ್ರೀ ಸ್ಥಾಪನೆಮಾಡುವುದಕ್ಕೆ ಅವಶ್ಯಕವಾದ ಎಲ್ಲಾ ಅನುಕೂಲತೆಗಳು ಇವೆ ಅನ್ನುವುದನ್ನು ಸರ್ಕಾರದವರು ಪರಿಶೀಲನೆ ಮಾಡಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ನಾವು ಪರಿಶೀಲನೆ ಮಾಡಿದ್ದೇವೆ. ಇಂಡಿಯಾ ಸರ್ಕಾರದವರಿಗೆ ಭಟ್ಕರವರು ಹೇಳಿರುವ ವಿಷಯ ಎಲ್ಲಾ ತಿಳಿಸಿದ್ದೇವೆ.

So far as I know, Sri Bhat is at it from the last ten years. I am getting it examined since he has come forward with an application. I have kept an open mind and the question will be examined by the Council. In view of the importance of the subject, I have placed it before the Cabinet.

ಶ್ರೀ ಎಸ್. ಗೋಪಾಲಗೌಡ.—ತಾಳಗುಪ್ಪದಿಂದ ಭಟ್ಕಲ್‌ವರೆಗೂ ರೈಲ್ವೇಲೈನ್ ಹಾಕುವುದಕ್ಕೆ ಕೇಂದ್ರ ಸರ್ಕಾರದವರು ಒಪ್ಪಿಗೆ ಕೊಟ್ಟಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದು ನನ್ನ ಗಮನಕ್ಕೆ ಬಂದಿಲ್ಲ. ಅರ್ಜಿ ಒಳಗೆ ಬರೆದಿದ್ದಾರೆ—ಕೇಂದ್ರ ಸರ್ಕಾರದವರು ಮಾಡದೇ ಇದ್ದರೆ ನನಗೆ ರೈಲು ಹಾಕುವುದಕ್ಕೆ ಅವಕಾಶಕೊಡಿ ಎಂದು ಹೇಳಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಇದು ಎಷ್ಟು ಕೋಟಿ ರೂಪಾಯಿಗಳ ಅಂದಾಜಿನ ಕೈಗಾರಿಕೆ, ಸ್ವಾಮಿ ?

Sri H. SIDDAVEERAPPA.—I am given to understand that it comes to somewhere about Rs. 10 crores.

9 A.M.

ಶ್ರೀ ಎಸ್. ಗೋಪಾಲಗೌಡ.—ಇಂಥ ಒಂದು ಕೈಗಾರಿಕೆಯನ್ನು ಮೈನೂರು ಸರ್ಕಾರದವರೇ ಏನಾದರೂ ಸ್ಥಾಪನೆ ಮಾಡಬೇಕೆಂಬ ಉದ್ದೇಶವನ್ನಿಟ್ಟುಕ್ಕೊಂಡಿರುತ್ತಾರೆಯೇ ?

Sri H. SIDDAVEERAPPA.—This is a subject which essentially comes under the Ministry of Production at the Centre.

ಬಹುಶಃ ಆ ರೀತಿ ಅಂಥ ಅವಕಾಶವೇನಾದರೂ ಇದ್ದರೆ ನಾವು ಅದನ್ನು ಕೇಂದ್ರ ಸರ್ಕಾರಕ್ಕೆ ತಿಳಿಸುತ್ತೇವೆ. ಈಗಾಗಲೆ ಈ ಭಟ್ಟರು ನನ್ನಲ್ಲಿಗೆ ಬಂದು ನೋಡುವುದಕ್ಕೆ ಪ್ರಾರಂಭವಾಗಿ 2 ತಿಂಗಳ ಮೇಲಾಯಿತು.

ಶ್ರೀ ಎಸ್. ಗೋಪಾಲಗೌಡ.—ಈಗ ತಾವು ನಾಳೆ ಪ್ರಾರಂಭಿಸಲಿರುವ ದ್ವಿತೀಯ ಪಾಂಚವರ್ಷಿಕ ಯೋಜನೆಯಲ್ಲಿ ಯಾವ ಯಾವ ಕೆಲಸ ಕಾರ್ಯಗಳನ್ನು ಸೇರಿಸಬೇಕೆಂದು ಯೋಚಿಸುತ್ತಿದ್ದೀರೋ ಆ ಪೈಕಿ ಈ ಒಂದು ಕೈಗಾರಿಕೆಯನ್ನು ಸೇರಿಸತಕ್ಕ ಬಗ್ಗೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಮಾಡುತ್ತೇವೆ. ಇಲ್ಲಿಯವರೆಗೂ ಯಾವ ಯೋಚನೆಯನ್ನೂ ಮಾಡಿಲ್ಲ.

Sri B. MADHAVACHAR.—Is he a scientist or an expert ?

Sri H. SIDDAVEERAPPA.—He seems to have a number of ideas. I do not know what else he is.

ಶ್ರೀ ಬಿ. ನಾರಾಯಣಸ್ವಾಮಿ.—ಸ್ವಾಮಿ, ತಮಗೆ ಈ ಭಟ್ಟರ ವ್ಯಕ್ತಿ ಪರಿಚಯವೇನಾದರೂ ಇದೆಯೇ ?

(ಉತ್ತರವಿಲ್ಲ.)

Sri V. M. MASCARENHAS.—Is it going to be in the private sector, public sector or in the combination of both ?

Sri H. SIDDAVEERAPPA.—He has been telling me that the Centre and the State need not give any money to him, and he can raise the entire funds required. What he wants is, some lands, and permission to generate hydro-electric power and various other things. As I have said this is a matter which requires to be carefully examined and looked into and I do not wish to take any decision until the Centre is consulted in the matter. I have also stated in my order obviously that we cannot commit ourselves to any definite course of action without the concurrence of the Central Government. Therefore, this is being examined at the Cabinet level.

Sri Mulka GOVINDA REDDY.—What is the capital that should be invested for starting the Marine Steel Industry ?

Sri H. SIDDAVEERAPPA.—I am told it is anywhere about Rs. 10 crores.

Sri Mulka GOVINDA REDDY.—How does he propose to raise that money ?

Sri H. SIDDAVEERAPPA.—I do not know. He is telling me that he will get the money.

Sri Mulka GOVINDA REDDY.—What are the concrete proposals that he placed before the Government for raising the capital ?

Sri H. SIDDAVEERAPPA.—He has not stated a word about capital. He said : "give me land, water, power and permission to do many more things on the land."

Mr. SPEAKER.—And also blessings.

ಶ್ರೀ ಬಿ. ನಾರಾಯಣಸ್ವಾಮಿ.—ಈಗ ತಾವು ಇಲ್ಲಿ ತಿಳಿಸಿರುವ ಶ್ರೀ ಎಚ್. ಎಂ. ಭಟ್ಟ ಅನ್ನತಕ್ಕವರು ಈ ಹಿಂದೆ ಭಟ್ಕಳ್‌ನಲ್ಲಿ ಒಂದು ಕಂಪೆನಿಯನ್ನು ಫ್ಲೋಟ್ ಮಾಡಿದ್ದವರು ಇವರೇ ಅಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಇವರೇ ಇರಬೇಕೆಂತ ನನಗೂ ಸ್ವಲ್ಪ ಜ್ಞಾಪಕವಿದೆ.

ಶ್ರೀ ಬಿ. ನಾರಾಯಣಸ್ವಾಮಿ.—ಅವರ ಪೂರ್ಣ ಪರಿಚಯವನ್ನು ಸರ್ಕಾರದವರು ಅರಿತುಕೊಂಡಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅವರ ವಿಚಾರ ಸ್ವಲ್ಪ ಮಟ್ಟಿಗೆ ಗೊತ್ತಿದೆ.

ಶ್ರೀ ಬಿ. ನಾರಾಯಣಸ್ವಾಮಿ.—ಅವರಿಗೆ ಬೋನಾ ಫೈಡಿ ಇದೆಯೇ, ಇವರಲ್ಲಿ ಬಂಡವಾಳವಿದೆಯೇ, ಇವರನ್ನು ನಂಬಿ ಈ ಕೆಲಸ ಪ್ರಾರಂಭಿಸಬಹುದೇ ಎಂಬ ಈ ವಿಚಾರಗಳನ್ನೆಲ್ಲಾ ಸರ್ಕಾರದವರು ಪರಿಶೀಲನೆ ಮಾಡಿದ್ದೀರಾ ?

Sri H. SIDDAVEERAPPA.—Sir, here is a gentleman who comes and tells me : " I have a right to be heard.' Therefore, I will hear him and form my own opinion and come to a conclusion.

Sri B. NARAYANASWAMY.—The House also is entitled to know how the Government are going to hear after knowing the antecedents of the person as such. I would request the Minister to let this House know the reaction of the Government.

Sri H. SIDDAVEERAPPA.—The Government have not formed any opinion. Of course we will not be hustled to any course of action until we examine the whole case including the credentials of the gentleman who has sponsored this scheme.

ಶ್ರೀ ಆರ್. ಮುನಿಸ್ವಾಮಯ್ಯ.—ಈ ನಾಗವಳ್ಳಿ ಅನ್ನುವುದು ನಮ್ಮ ಮೈಸೂರು ಸ್ಟೇಟಿನಲ್ಲಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಸಾಗರ ತಾಲ್ಲೂಕಿನಲ್ಲಿದೆ.

ಶ್ರೀ ವಿ. ಆರ್. ನಾಯ್ಕ್.—ವ್ಯಕ್ತಿಗಳ ಅಂತರಂಗವನ್ನು ತಿಳಿದುಕೊಳ್ಳುವುದಕ್ಕೆ ಸರ್ಕಾರಕ್ಕೆ ಹಕ್ಕಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಯಾರೇ ಆಗಲಿ, ನಾವು ಇಂಥಾ ಕೆಲಸ ಮಾಡಬೇಕೆಂದಿದ್ದೇವೆ ಎಂದು ಸರ್ಕಾರದವರ ಮುಂದೆ ಭಂಡಾಗ ಅವರ ಪೂರ್ಣ ಪರಿಚಯವನ್ನು ತಿಳಿದುಕೊಳ್ಳಲು ಸರ್ಕಾರಕ್ಕೆ ಯಾವಾಗ್ಲೂ ಅವಕಾಶವಿದೆ.

ಶ್ರೀ ಜಿ. ಬಸಪ್ಪ.—ಈ ಭಟ್ಟರಿಗೆ ಬೆಂಗಳೂರಿನಲ್ಲಿ ಎಷ್ಟು ಹೋಟೇಲುಗಳಿರುತ್ತವೆಂಬುದನ್ನು ಹೇಳುವುದಕ್ಕಾಗುತ್ತದೆಯೇ ?

(ಉತ್ತರವಿಲ್ಲ.)

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಈ ಕೈಗಾರಿಕೆಯನ್ನು ಪ್ರಾರಂಭಿಸುವುದು ಒಳ್ಳೆಯದೇ ಅಥವಾ ಅಲ್ಲವೇ ಅನ್ನುವುದನ್ನಾದರೂ ಪರಿಶೀಲನೆ ಮಾಡುವುದಕ್ಕೇಕೆ ಆಗುವುದಿಲ್ಲ ?

Sri H. SIDDAVEERAPPA.—We keep an open mind. ಈಗಲೂ ಅದನ್ನು ಪರಿಶೀಲಿಸುತ್ತಿದ್ದೇವೆ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಕೈಗಾರಿಕೆ ಒಳ್ಳೆಯದೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡುವುದಕ್ಕೆ ಸರ್ಕಾರ ಆಲೋಚನೆ ಮಾಡುತ್ತಿದೆಯೇ?

ಶ್ರೀ ಹೆಚ್. ಸಿದ್ದವೀರಪ್ಪ.—ಕೈಗಾರಿಕೆ ಒಳ್ಳೆಯದು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಇದು ಸರ್ಕಾರದವರು ನಡೆಸುವುದಕ್ಕೆ ಲಾಯಖ್ಖಾದ ಕೈಗಾರಿಕೆಯಲ್ಲವೇ ?

Sri H. SIDDAVEERAPPA.—It is a matter that legitimately comes within the purview of the Ministry of Production at the Centre and if I find there are facilities to start this Industry, I will send a request to the Central Ministry.

Sri A. V. NARASIMHA REDDY.—Is not ship-building a Central subject? Can the provincial Government also have a hand in this thing?

Sri H. SIDDAVEERAPPA.—I have already, I think sufficiently, replied this question.

Minerals in Chiknaikanahalli

Q.—925. Sri C. H. LINGADEVARU (Chiknaikanahalli).—

Will the Government be pleased to state:—

(*a*) what minerals are found in Chiknaikanahalli Taluk;

(*b*) the quantity of production of each mineral for the last four years;

(*c*) the receipts from royalty and other taxes for the last four years on these minerals;

(*d*) whether they have contemplated to establish any mineral industry in the taluk?

A.—Sri H. SIDDAVEERAPPA (Minister for Home and Industries).—

(*a*) Manganese Ore, Iron Ore, Limestone, Refractory Clay and Red and Yellow Ochre.

(*b*) and (*c*)—

Year	Manganese		Refractory Clay		Other Minerals
	Production	Royalty and rents collected	Production	Royalty and rents collected	
	Tons Cwts.	Rs. a. p.	Tons Cwts.	Rs.	
1951	3,151 0	9,601 6 0	400 0	1,125	...
1952	11,461 0	29,227 11 0	106 0	...	...
1953	32,231 0	47,673 11 3	701 10	...	...
1954	12,387 5	31,134 8 0	...	...	...

(*d*) The recommendations of the Mineral Development Committee in this behalf are under consideration.

ಶ್ರೀ ಸಿ. ಎಚ್. ಲಿಂಗದೇವರು.—ತಾವೀಗ ಚಿಲ್ಲ ಕೊಟ್ಟಿರತಕ್ಕಂಥ ಅಂಕಿ ಅಂಶಗಳು ಮೈನಿಂಗ್ ಮಾಡಿದ್ದೋ ಅಥವಾ ರಫ್ ಮಾಡಿದ್ದೋ?

Sri H. SIDDAVEERAPPA.—I have got a list here. I will get it verified and let you know.

ಶ್ರೀ ಸಿ. ಎಚ್. ಲಿಂಗದೇವರು.—ಈಗ ಈ ಮ್ಯಾಂಗನೀಸ್ ದೊರೆಯುತ್ತಿರುವ ಪ್ರದೇಶದಲ್ಲಿ ಹೆಚ್ಚು ಮ್ಯಾಂಗನೀಸ್ ಅಂಶ ದೊರೆಯತಕ್ಕಂಥ ಓರುಗಳನ್ನು ಮಾತ್ರ ಕೈಗೊಂಡು ಕಮ್ಮಿ ಅಂಶವಿರತಕ್ಕಂಥ ಓರುಗಳನ್ನು ಬಿಟ್ಟುಬಿಡುತ್ತಿದ್ದಾರೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವು ಕಡೆ ಹಾಗೆ ಬಿಟ್ಟಿದ್ದಾರೆಂದು ವರ್ತಮಾನ ಬಂದಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಹೀಗೆ ಅವರು ಹೆಚ್ಚು ಪರ್ಸೆಂಟೇಜ್ ಇರತಕ್ಕಂಥ ಮೈನುಗಳನ್ನೆಲ್ಲಾ ಆಖೈರು ಮಾಡಿ ಕಡಮೆ ಪರ್ಸೆಂಟೇಜಿನ ಮೈನುಗಳನ್ನು ಮಾತ್ರ ಉಳಿಸಿದರೆ ಆಗ ನಮಗೆ ಬರತಕ್ಕ ವರಮಾನ ಕಡಮೆಯಾಗುವುದಿಲ್ಲವೇ?

Sri H. SIDDAVEERAPPA.—That is one of the recommendations of the Committee of which the Hon'ble Member is a member. I am getting it examined.

ಶ್ರೀ ಸಿ. ಹೆಚ್. ಲಿಂಗದೇವರು.—ನಮ್ಮ ತಾಲ್ಲೂಕಿನಲ್ಲಿ ಭಂಗಾರದ ಅದಿರೇನೂ ಸಿಕ್ಕುವುದಿಲ್ಲವೋ?

ಶ್ರೀ ಎಚ್. ಸಿದ್ದವೀರಪ್ಪ.—ನಿಮ್ಮ ತಾಲ್ಲೂಕಿನಲ್ಲಿ ಸಿಕ್ಕತಕ್ಕ ಭಂಗಾರಕ್ಕೆ ಇನ್ನೂ ಸರಿಯಾದ ಆ ಬಣ್ಣ ಬಂದಿಲ್ಲ (ನಗು).

ಶ್ರೀ ಸಿ. ಎಚ್. ಲಿಂಗದೇವರು.—ಎಷ್ಟು ಭಂಗಾರದ ಅದಿರನ್ನು ತೆಗೆಯಲಾಯಿತು? ಅನ್ನತಕ್ಕ ಬಗ್ಗೆ ಅಂಕಿ ಅಂಶಗಳನ್ನೊದಗಿಸಬೇಕೆಂದು ಕೇಳಿದ್ದೆ. ತಾವೇಕೆ ಓದಗಿಸಲಿಲ್ಲಾ?

Sri H. SIDDAVEERAPPA.—I am sorry for the omission. I will give you the figures if you want. Now the mine itself is closed temporarily.

ಶ್ರೀ ಸಿ. ಎಚ್. ಲಿಂಗದೇವರು.—ಈ ಪ್ರದೇಶದಲ್ಲಿ ಒಂದು ಸಿಮೆಂಟ್ ಕೈಗಾರಿಕೆಯನ್ನು ಸ್ಥಾಪಿಸಲು ಅವಕಾಶವಿದೆಯೆಂಬುದನ್ನು ಸರ್ಕಾರ ಪರಿಶೀಲನೆ ಮಾಡಿದ್ದೀರಾ?